# ಬದುಕಿದೆನು ಬದುಕಿದೆನು ಭವವೆನಗೆ ಹಿಂಗಿತು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 394.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 104.
3. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 41.
4. **Note:** Lyrics given here are as per Ref. 1. The wordings in Ref. 2 are fully matching with Ref. 1. The wordings in Ref. 3 are mostly same as in Ref. 1, but few are different which are not considered here.
5. **Note:** Ankita is same in these reference books.
6. **Note:** Singer has followed these lyrics.
7. **Note:** There is a similar kruti by Sri. KANAKA DASARU.

ರಾಗ: ಕಾಂಭೋದಿ ತಾಳ: ಝಂಪೆ

ಬದುಕಿದೆನು ಬದುಕಿದೆನು ಭವವೆನಗೆ ಹಿಂಗಿತು
ಪದುಮನಾಭನ ಪಾದದೊಲುಮೆ ಎನಗಾಯಿತು || ಪ ||

ಮುಕ್ತರಾದರು ಎನ್ನ ನೂರೊಂದು ಕುಲದವರು
ಮುಕ್ತಿ ಮಾರ್ಗಕೆ ಯೋಗ್ಯ ನಾನಾದೆನು
ಮುಕ್ತಿದಾಯಕನ ಭಕ್ತಿಗೆ ಮನವು ನೆಲೆಸಿತು
ವ್ಯಕ್ತವಾಯಿತು ನಾಲಿಗೆಯೊಳು ಹರಿನಾಮ || 1 ||

ಹರಿಯ ತೀರ್ಥಪ್ರಸಾದವಿಂದೆನಗೆ ದೊರಕಿತು
ಹರಿಕಥಾಮೃತವೆನ್ನ ಕಿವಿಯೊಳಾಯ್ತು
ಹರಿದಾಸರು ಎನ್ನ ಬಂಧು ಬಳಗಾಯಿತು
ಹರಿಮುದ್ರೆ ಎನಗಾಭರಣವಾಯಿತು || 2 ||

ಹಿಂದೆನ್ನ ಸಂತತಿಗೆ ಸಕಲ ಸಾಧನವಾಯ್ತು
ಮುಂದೆನ್ನ ಜನ್ಮವು ಸಫಲವಾಯ್ತು

ತಂದೆ ಪುರಂದರ ವಿಠಲನೆಂದೆಂಬ ಪರದೈವ
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ವ್ಯಾಸರಾಯ ಸ್ವಾಮಿಗಳಿಂದ ಹರಿದಾಸ ದೀಕ್ಷೆಯನ್ನು ಪಡೆದುಕೊಂಡ ನಂತರ, ತಮಗೊದಗಿದ ಸಂತೋಷ, ಸಮಾಧಾನಗಳನ್ನು ದಾಸರು ಈ ಹಾಡಿನಲ್ಲಿ ಸೂಚಿಸಿದ್ದಾರೆ.

**ಭವ ಹಿಂಗಿತು –** ಸಂಸಾರದ ಕಷ್ಟ ತೊಲಗಿತು; ಸಂಸಾರವೆಂಬ ಭಾರ ಇಳಿಯಿತು.

**ಹರಿಮುದ್ರೆ –** ವೈಷ್ಣವರು ವಿಷ್ಣುವಿನ ಹೆಸರಿನಿಂದ ಧರಿಸುವ ಪಂಚಮುದ್ರೆಗಳು: ಶಂಖ, ಚಕ್ರ, ಗದೆ, ಪದ್ಮ ಎಂಬ ನಾಲ್ಕು ಆಯುಧಗಳು ಇದರಲ್ಲಿ ಸೇರುತ್ತವೆ; ಐದನೆಯದು ನಾರಾಯಣ ಮುದ್ರೆ.

**ಮುಕ್ತಿ ಮಾರ್ಗಕ್ಕೆ ಯೋಗ್ಯ... –** ಗುರುವಿನಿಂದ ಉಪದೇಶ ಪಡೆದದ್ದೇ ಯೋಗ್ಯತೆ.

**Classification:** Keerthane
**Ankita:** purandara vittala
**Location:** NA
**Category:** Sankeerna.
**Sub-Category:** bhava, Krishna, tirtha, kivi, bandhu, abharana, mukti, kula, bhakti, nalige, mana, janma, daiva, hrudaya,
**Pravachana:** NA
**Explanation:** NA